Institutions for meeting the pay and allowances of the employees of such institutions in 1969-70 and 1970-71.

		Accounts 1969-70	*Accounts* 1970-71
		(Rs. in crores)	
1.	Expenditure on pay and allowances of Government employees ..	63.19	77.77
2.	(a) Grant-in-aid to Educational Institutions	14.48	16.99
	(b) 80 per cent of which is assumed as attributable to meet the expenditure on salaries and allowances of the employees of such Institutions ..	11.59	13.39

ಶ್ರೀ ಜಿ. ಪುಟ್ಟಸ್ವಾಮಿ.—ಸರಕಾರಿ ನೌಕರರುಗಳ ಸಂಬಳಸಾರಿಗೆಗಳ ಬಗ್ಗೆ ರಾಷ್ಟ್ರೀಯ ಆದಾಯ ಕಾರ್ಯ ನೀತಿಯನ್ನು ಮಾಡುವಾಗ ಸುಮಾರು ಶೇಕಡಾ ಅರವತ್ತರಷ್ಟು ಬಡವರೇ ಇರುವಾಗ ಅವರ ಆದಾಯವನ್ನೂ ಗಮನದಲ್ಲಿಟ್ಟುಕೊಂಡು ತಾವು ಶಿಫಾರಸು ಮಾಡುತ್ತೀರಾ ಹೇಗೆ?

†ಶ್ರೀ ಎಂ. ಪ್ಯೆ. ಫೂರ್ಪಡೆ.—ಇದೇ ಉದ್ದೇಶವನ್ನೇ ಕುರಿತು ನಾನು ನಿನ್ನೆ ತಮ್ಮ ಕಡೆಯಿಂದ ಬಂದ ಒಂದು ಪ್ರಶ್ನೆ ಹೆಚ್ಚು ಕಡಿಮೆ ಇದೇ ಸಂಬಂಧವಾಗಿ ಬಂದಾಗ ವಿವರವಾದ ಉತ್ತರಗಳನ್ನು ಹೇಳಿರುತ್ತೇನೆ. ನ್ಯಾಷನಲ್ ಪಾಲಿಸಿ ಎಂದರೆ ಎಲ್ಲರ ಹಿತವನ್ನು ಗಮನದಲ್ಲಿಟ್ಟುಕೊಂಡು ನ್ಯಾಷನಲ್ ಪಾಲಿಸಿ ಮಾಡಬೇಕಾಗುತ್ತದೆ. ಬರೀ ಸರಕಾರದ ನೌಕರರು ಮಾತ್ರವಲ್ಲ ಎಂದು ತಾವು ಹೇಳುವ ಹಾಗೆ ಶೇಕಡ 60ರಷ್ಟು ಬಡವರು ಇರುವ ಅವರ ಆದಾಯವನ್ನೂ ಗಮನದಲ್ಲಿಟ್ಟುಕೊಂಡು ರಾಷ್ಟ್ರೀಕೃತ ನೀತಿಯನ್ನು ರೂಪಿಸಬೇಕಾಗುತ್ತದೆ ಎಂದು ಆಗಲೇ ಹೇಳಿದ್ದೇನೆ.

PAY SCALES AND SERVICE CONDITIONS OF THE EMPLOYEES OF CO-OPERATIVE INSTITUTIONS.

217. Sri B. V. KAKKILAYA (Buntwal).—

Will the Minister for Co-operation be pleased to state:—

(*a*) whether the Government has received any representation urging the appointment of a pay committee to fix the scales of pay and other conditions of service of the employees of Co-operative institutions;

(*b*) if so, the action taken by the Government in the matter;

Sri A. SHANKARA ALVA (Minister for Co-operation).—

(*a*) Yes.

(*b*) It has been decided by Government that it is not necessary to appoint the Pay Committee in this behalf.

ಶ್ರೀ ಎಂ. ಎಸ್. ಕೃಷ್ಣನ್.—ಉತ್ತರದಲ್ಲಿ ಸರಕಾರದ ಆಡಳಿತದಲ್ಲಿರುವ ಸರಕಾರಿ ನೌಕರರುಗಳಿಗೆ ಸಂಬಳ ಸಾರಿಗೆಗಳನ್ನು ಪುನರ್ವಿಮರ್ಶೆ ಮಾಡುವಾಗ ಅದರಂತೆ ಸಹಕಾರ ಸಂಸ್ಥೆಗಳಲ್ಲಿರುವ ನೌಕರರುಗಳಿಗೂ ಒಂದು ಪೇ ಕಮಿಟಿ ಮಾಡಬೇಕೆಂದು ಕೇಳಿದರೆ ಅದು ಸಾಧ್ಯವಿಲ್ಲ ಎಂದು ಹೇಳಲು ಕಾರಣಗಳೇನು ?

ಶ್ರೀ ಎ. ಶಂಕರ ಆಳ್ವ.—1966ನೇ ಇಸವಿಯಲ್ಲಿ ಸಹಕಾರ ಸಂಸ್ಥೆಗಳ ನೌಕರರುಗಳ ಬಗ್ಗೆ ಒಂದು ಕಮಿಟಿ ಮಾಡಿ ಅದರ ರಿಪೋರ್ಟ್ ಬಂದ ಮೇಲೆ ಅದನ್ನು ಎಲ್ಲ ಸೊಸೈಟಿಗಳಿಗೂ ಕಳುಹಿಸಿಕೊಟ್ಟು ಅದರ ಪ್ರಕಾರ ವೇತನಗಳನ್ನು ಪರಿಷ್ಕರಿಸುವುದು ಒಳ್ಳೆಯದು ಎಂದು ಸೂಚನೆ ಕೊಡಲಾಗಿತ್ತು. ಅದರೆ ಕೆಲವು ಸೊಸೈಟಿಗಳವರು ಇದರಂತೆ ಕೊಡುವುದು ಸಾಧ್ಯವಿಲ್ಲ ಎಂದು ವರದಿ ಮಾಡಿದರು. ಇವರ ಬಗ್ಗೆ ಒಬ್ಬರು ಶ್ರೀ ಕೃಷ್ಣಮೂರ್ತಿ ಎನ್ನುವವರು ಸರಕಾರಕ್ಕೆ ಒಂದು ಮನವಿ ಮಾಡಿ ಸಹಕಾರ ಸಂಸ್ಥೆಗಳ ನೌಕರರುಗಳಿಗೆ ಎಂದು ಪೇ ಕಮಿಟಿ ಮಾಡಿದ್ದರೂ ಅದನ್ನು ಜಾರಿಗೆ ಕೊಡಲು ಗಮನ ಕೊಡುತ್ತಿಲ್ಲ ಎಂದು ಹೇಳಿದರು. ಇವರ ಮನವಿ ಬಂದ ಕೂಡಲೇ ಕೋ ಆಪರೇಟಿವ್ ಇಲಾಖೆಯ ರಿಜಿಸ್ಟ್ರಾರ್‌ರವರು ಹಾಗೂ ನಾಲ್ಕು ಅಪೆಕ್ಸ್ ಬ್ಯಾಂಕುಗಳ ಅಧ್ಯಕ್ಷರು ಸೇರಿಕೊಂಡು ಒಂದು ಮೀಟಿಂಗು ಮಾಡಿ ಎಲ್ಲ ಸೊಸೈಟಿಗಳವರೂ 66ರಲ್ಲಿ ಮಾಡಿರುವ ಪೇ ಕಮಿಟಿಯ ಶಿಫಾರಸುಗಳನ್ನು ಜಾರಿಗೆ ತರಬೇಕೆಂದು ಸೂಚನೆ ಕಳುಹಿಸಿದರು. ಇದನ್ನು ಎಲ್ಲ ಸೊಸೈಟಿಗಳಿಗೂ ಕಳುಹಿಸಿದಾಗ ಕೆಲವು ಸೊಸೈಟಿಗಳವರು ನಮ್ಮಲ್ಲರುವ ಹಣಕಾಸು ಪರಿಸ್ಥಿತಿ ಸರಿಯಾಗಿಲ್ಲ ಇದರಿಂದ ನಾವು ಕೊಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು. ಕೆಲವು ಸೊಸೈಟಿಗಳವರು ಇದರಂತೆ ಇಪ್ಲಿಮೆಂಟು ಮಾಡಿದ್ದಾರೆ. ಇದರ ಎರಡನೇ ಕಮಿಟಿ ಮಾಡಬೇಕೆಂದರೆ ಮೊದಲನೆ ಪೇ ಕಮಿಟಿ ವರದಿಯನ್ನೇ ಜಾರಿಗೆ ಕೊಡಲು ಆಗಲಿಲ್ಲ. ಇದರಿಂದ ಎರಡನೇ ಪೇ ಕಮಿಟಿ ಮಾಡುವುದು ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸರಕಾರದ ಅಸಮರ್ಥತೆಯನ್ನು ತೋರಿಸುತ್ತಾ ಇಲ್ಲಿ ಬಂದಿರುವ ಶಿಫಾರಸುಗಳನ್ನು ಏತಕ್ಕೆ ಇಂಪ್ಲಿಮೆಂಟು ಮಾಡಲು ಆಗುವುದಿಲ್ಲ ಎನ್ನುವುದನ್ನು ಸರಿಯಾಗಿ ಪರಿಶೀಲನೆ ಮಾಡದೇ ಇರುವುದರಿಂದ ಇಂದು ಸೊಸೈಟಿಗಳ ಸ್ಥಿತಿ ಬಹು ಅಧೋಗತಿಗೆ ಇಳಿಯಲು ಕಾರಣವಾಗಿದೆ, ಇದನ್ನು ಹೇಳುವುದನ್ನು ಬಿಟ್ಟು ಅವರು ಕೇಳುವಂತೆ ಒಂದು ಪೇ ಕಮಿಟಿ ಮಾಡಿ ಅದನ್ನು ಅನುಕರಣೆ ಮಾಡಲು ಸರಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎ. ಶಂಕರ ಆಳ್ವ.—ಇದರಲ್ಲಿ ಅಸಮರ್ಥತೆ ಏನೂ ಇಲ್ಲ. ಮೊದಲಿಗೆ ಒಂದು ವರದಿ ಬಂದು ಅದನ್ನೇ ಜಾರಿಗೆ ಕೊಡದೇ ಇರುವಾಗ ಮತ್ತೆ ಇನ್ನೊಂದು ಪೇ ಕಮಿಟಿ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಅದಲ್ಲದೆ ಸೊಸೈಟಿಗಳಿಗೆ ಅವರದೇ ಒಂದು ರೀತಿಯಾದ ಬೈಲಾಗಳಿವೆ. ಅದರಂತೆ ಅವರು ಅವರ ನೌಕರರುಗಳಿಗೆ ಸಂಬಳವನ್ನು ಹೆಚ್ಚು ಕಡಿಮೆ ಮಾಡಿ ಕೊಡಲು ಅವಕಾಶವಿದೆ. ಸರಕಾರದವರು ಇದರ ಬಗ್ಗೆ ಏನೂ ಮಾಡಲೂ ಸಾಧ್ಯವಿಲ್ಲ, ಹಿಂದೆ ಮಾಡಿದ ರಿಪೋರ್ಟಿನಂತೆ ಸೊಸೈಟಿಗಳವರು ನಾವು ಜಾರಿಗೆ ಕೊಡಲು ಆಗುವುದಿಲ್ಲ ಎಂದು ಹೇಳುವಾಗ ಮತ್ತೆ ಇನ್ನೊಂದು ಕಮಿಟಿ ಮಾಡಿ ರಿಪೋರ್ಟು ಮಾಡಬೇಕೆಂದು ಹೇಳುವುದು ಸಾಧ್ಯವಿಲ್ಲ. ಸಹಕಾರ ಸಂಸ್ಥೆ ಎಂದರೆ ಸರ್ಕಾರದ ಅಂಗವಲ್ಲ. ನಾವು ಅವರಿಗೆ ಸಜೆಷನ್ಸ್ ಕೊಡಬಹುದು. ಬೇರೆ ಏನೂ ಮಾಡಲಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಬೈರೇಗೌಡ.—ಅನೇಕ ಸಹಕಾರ ಸಂಘಗಳಲ್ಲಿ ತಿಂಗಳಿಗೆ ಕೇವಲ 100 ರೂಪಾಯಿ ಸಂಬಳ ಕೊಡುತ್ತಿದ್ದಾರೆ. ಇದರಿಂದಾಗಿ ಹಣ ದುರುಪಯೋಗವಾಗುವುದಕ್ಕೆ ಅವಕಾಶವಾಗಿದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರೇ ನೇರವಾಗಿ ಸೆಕ್ರೆಟರಿಗಳನ್ನು ನೇಮಕಮಾಡಿ ಅವರಿಗೆ ಸಂಬಳವನ್ನು ಕೊಡುವ ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀ ಎ. ಶಂಕರ ಆಳ್ವ.—ಸಂಬಳ ಕೊಡುವವರು ಸೊಸೈಟಿಯವರು. ಅವರ ಆದಾಯವನ್ನು ನೋಡಿಕೊಂಡು ಬೈಲಾ ಮಾಡಿಕೊಳ್ಳುತ್ತಾರೆ. ಅದ್ದರಿಂದ ನಾವು ನೇಮಕ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಪ್ರಭಾಕರ್.—ಇವರು ಸರ್ಕಾರಿ ನೌಕರರು ಎಂದು ಹೇಳುತ್ತೀರೋ ಇಲ್ಲವೋ ?

ಶ್ರೀ ಎ. ಶಂಕರ ಆಳ್ವ.—ಅವರು ಸರ್ಕಾರಿ ನೌಕರರಲ್ಲ.

ಶ್ರೀ ವಿ. ಎನ್. ಪಾಟೀಲ್.—ಪಂಡಿತ್ ಕಮಿಟಿ ವರದಿಯನ್ನು ಎಷ್ಟು ಸೊಸೈಟಿಗಳು ಕಾರ್ಯಗತ ಮಾಡಿವೆ, ಎಷ್ಟು ಮಾಡಿಲ್ಲ ? ರಿಜಿಸ್ಟರಾಗಿರುವ ಸೊಸೈಟಿಗಳ ಮೇಲೆ ಸರ್ಕಾರದ ಹತೋಟಿ ಏನು ?

ಶ್ರೀ ಎ. ಶಂಕರ ಆಳ್ವ.—ಎಷ್ಟು ಸೊಸೈಟಿಗಳು ಇನ್ವೆಸ್ಟ್‌ಮೆಂಟ್ ಮಾಡಿವೆ ಎನ್ನುವ ವಿವರಗಳು ಇಲ್ಲ. ಸಿಬ್ಬಂದಿಯನ್ನು ಅವರೇ ನೇಮಕ ಮಾಡಿಕೊಳ್ಳಬೇಕು. ಎಷ್ಟುಕೊಡಬೇಕು ಏನು ಎನ್ನುವುದನ್ನು ಕೂಡ ಅವರೇ ನಿರ್ಣಯ ಮಾಡಿಕೊಳ್ಳಬೇಕು.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ.—ಸರ್ಕಾರದವರು ಸೇಕಡ 51ರಷ್ಟು ಮತ್ತು ಹೆಚ್ಚಾಗಿ ಹಣವನ್ನು ಒದಗಿಸುತ್ತಿದ್ದಾರೆ. ಕೆಲವು ಸಂಸ್ಥೆಗಳಿಗೆ 90 ಭಾಗವನ್ನು ಕೂಡ ಕೊಡುತ್ತಿದ್ದಾರೆ. ನೇಮಕಾತಿಗಳನ್ನು ಮಾಡುವಾಗ ಸರ್ಕಾರದ ಆದೇಶವನ್ನು ಅನುಸರಿಸಿ ಮಾಡುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಕೊಡುವ ವೇತನಗಳಿಗೆ ಅನುಗುಣವಾಗಿ ಇರುವಂತೆ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಎ. ಶಂಕರ ಆಳ್ವ.—ಸೊಸೈಟಿ ಕಾನೂನು ಪ್ರಕಾರ ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಪಂಡಿತ್ ಕಮಿಟಿ ವರದಿಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಒತ್ತಾಯ ಮಾಡಲು ಸಾಧ್ಯವಾಗುವುದಿಲ್ಲ ; ಅಡ್‌ವೈಸ್ ಮಾಡಬಹುದು ಎಂದು ಹೇಳಿದರು. ಕಾರ್ಮಿಕರ ವೇತನ ಮಂಡಳಿಯನ್ನು ರಚನೆ ಮಾಡಿದಾಗ, ಇವೇ ರೀತಿಯ ಪ್ರಸಂಗ ಬಂದಾಗ, ವೇತನ ಮಂಡಳಿಯ ವರದಿಯು ಸಲಹಾ ರೂಪದಲ್ಲಿದ್ದರೂ ಇಟ ಹ್ಯಾಸ್ ಗಾಟ್ ದಿ ಫೋರ್ಸ್ ಆಫ್ ಲಾ ಅದನ್ನು ಕಾರ್ಯಗತ ಮಾಡಲೇ ಬೇಕು ಎಂದು ಇರಬೇಕಾದರೆ ಸಹಕಾರ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಏಕೆ ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲ ?

ಶ್ರೀ ಎ. ಶಂಕರ ಆಳ್ವ.—ಫೋರ್ಸ್ ಆಫ್ ಲಾ ಎಂದು ಹೇಳುವುದಕ್ಕೆ ಆಗುವುದಿಲ್ಲ. ಉದಾಹರಣೆಗೆ ಡಿ. ಸಿ. ಸಿ. ಬ್ಯಾಂಕ್ ತೆಗೆದುಕೊಂಡರೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಬ್ಯಾಂಕುಗಳಿವೆ. ಅವುಗಳ ಆರ್ಥಿಕ ಪರಿಸ್ಥಿತಿ ಹೆಚ್ಚು ಕಡಿಮೆ ಇರುತ್ತದೆ. ಕೆಲವು ಬ್ಯಾಂಕುಗಳು ಸ್ವಲ್ಪ ಲಾಭ ಮಾಡುತ್ತವೆ, ಕೆಲವು ಕಡೆ ನಷ್ಟವಾಗುತ್ತಿರುತ್ತದೆ. ಅವರೆಲ್ಲರಿಗೂ ಇಷ್ಟೇ ಸಂಬಳ ಕೊಡಿ ಎಂದು ಸರ್ಕಾರ ಒತ್ತಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಪರಿಸ್ಥಿತಿ ಹದಗೆಟ್ಟಿರುವ ಸೊಸೈಟಿಗಳಿಗೆ, ಬ್ಯಾಂಕುಗಳಿಗೆ ಇಷ್ಟೇ ಸಂಬಳ ಕೊಡಿ ಎಂದರೆ ಹಾಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಅವು ದಿವಾಳಿಯಾಗುತ್ತವೆ. ಆದ್ದರಿಂದ ನಾವು ಒತ್ತಾಯ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಾಪೂಗೌಡ ರಾಯಪ್ಪ.—ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕ ನೌಕರರ ನೇಮಕವನ್ನು ಮತ್ತು ಅವರ ವೇತನವನ್ನು ರಿಜಿಸ್ಟ್ರಾರ್ ಅವರ ಅನುಮತಿಯನ್ನು ಪಡೆದುಕೊಂಡು ಮಾಡುತ್ತಿಲ್ಲವೇ ?

ಶ್ರೀ ಎ. ಶಂಕರ ಆಳ್ವ.—ಬೈಲಾಗಳನ್ನು ಮಾಡಿ ರಿಜಿಸ್ಟ್ರಾರ್ ಅವರಿಗೆ ಕಳುಹಿಸುತಾರೆ, ಅವರು ಅದನ್ನು ಸ್ಯಾಂಕ್ಷನ್ ಮಾಡುತ್ತಾರೆ.

GRANT OF FOREST LAND FOR CULTIVATION AT KANAKAPURA TALUK.

260. Sri S. KARIAPPA (Kanakapura).—

Will the Minitesr for Agriculture and Forests be pleased to state :—

(*a*) the names of spots where forest lands have been granted for cultivation on non-alienation scheme in Kanakapura Taluk ;

(*b*) the extent of the area in each case ;

(*c*) the dates of grant of each of these lands ;